**ಕರ್ನಾಟಕ ಅರಣ್ಯ ಇಲಾಖೆ**

ಸಂಖ್ಯೆ:ಭೂಮಿ/FC/FP/KA/Others/2113/2016

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಮಡಿಕೇರಿ ವಿಭಾಗ, ಮಡಿಕೇರಿ,
ದಿನಾಂಕ:28-08-2020.

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಕೊಡಗು ವೃತ್ತ, ಮಡಿಕೇರಿ.

ಮಾನ್ಯರೆ,

**ವಿಷಯ** : ಕೊಡಂಬೂರು ಗ್ರಾಮ ಸರ್ವೆ ನಂ. 128 ರಲ್ಲಿ 33 ಕೆ.ವಿ. ಲೈನ್ ಸಬ್‌ಸ್ಟೇಷನ್ ಮಾಡಲು ನೀಡಿರುವ 0.40 ಹೆಕ್ಟೇರ್ ಅರಣ್ಯ ಭೂಮಿಯ ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ.

**ಉಲ್ಲೇಖ** 1. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ಸೆಸ್ಕ್, ಮಡಿಕೇರಿ ಇವರ ಕಚೇರಿ ಪತ್ರ ಸಂಖ್ಯೆ: ಕಾನಿಇಂ(ವಿ)/ಸಕಾನಿಇಂ(ಕ)/ಸಿಂ(ತಾಂ)/ಕ-16/2019-20/9127-29 ದಿನಾಂಕ: 31-12-2019.

2. ವಲಯ ಅರಣ್ಯಾಧಿಕಾರಿ, ಮಡಿಕೇರಿ ವಲಯ, ಮಡಿಕೇರಿ ಇವರ ಕಚೇರಿ ಪತ್ರ ಸಂಖ್ಯೆ: ವಅಅ/ಮಡಿಕೇರಿ/33ಕೆ.ವಿ.ಲೈನ್/ಸಿಆರ್/26/2020-21/103 ದಿನಾಂಕ: 11-06-2020.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೊಡಗು ವೃತ್ತ, ಮಡಿಕೇರಿ 29/8/2020

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ಸೆಸ್ಕ್, ಮಡಿಕೇರಿರವರು ಕೊಡಂಬೂರು ಗ್ರಾಮ ಸರ್ವೆ ನಂ. 128 ರಲ್ಲಿ 33 ಕೆ.ವಿ. ಲೈನ್ ಸಬ್‌ಸ್ಟೇಷನ್ ಮಾಡಲು ನೀಡಿರುವ 0.40 ಹೆಕ್ಟೇರ್ ಅರಣ್ಯ ಭೂಮಿಯ ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರಂತೆ ಸದರಿ ಪ್ರಸ್ತಾವನೆ ಮತ್ತು ದಾಖಲಾತಿಗಳೊಂದಿಗೆ ಜಾಗದ ಸ್ಥಳ ಪರಿಶೀಲನೆ ನಡೆಸಿ KML File, Topo Sheet, Cadastre Map, Geo Map, Form Bi-Part I, Undertaking letter for payment of Renewal fee, Undertaking regarding not to transfer the leased land ಗಳನ್ನು ದೃಢೀಕರಿಸಿ ಗುತ್ತಿಗೆ ಅವಧಿ ವಿಸ್ತರಣೆ ಬಗ್ಗೆ ಅಭಿಪ್ರಾಯ ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ ಉಲ್ಲೇಖ(2)ರಲ್ಲಿ ಸದರಿಯವರು ಮೇಲ್ಕಂಡ ದಾಖಲಾತಿಗಳನ್ನು ದೃಢೀಕರಿಸಿ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಮುಂದಿನ ಕ್ರಮಗೊಳ್ಳುವ ಕುರಿತು ಈ ಕಚೇರಿ ವರದಿ ಸಲ್ಲಿಸಿರುತ್ತಾರೆ.

ಅದರಂತೆ, ಈ ಕೆಳಸಹಿದಾರರು ಗುತ್ತಿಗೆ ಅವಧಿಯನ್ನು ನವೀಕರಿಸುವ ಸಂಬಂಧ ಪಾರ್ಟ್ -2, ನಮೂನೆಯಲ್ಲಿ ಮಾಹಿತಿಯನ್ನು ಭರ್ತಿಮಾಡಿ, ಪರಿಹಾರಾತ್ಮಕ ನೆಡುತೋಪು ಬೆಳಸಿರುವ ಪ್ರದೇಶದ ಮಾಹಿತಿ, ಸ್ಥಳ ಪರಿಶೀಲನಾ ವರದಿ, ಸದರಿ ಮೇಲಿನ ಜಾಗವು ಯಾವುದೇ ಸ್ಮಾರಕ ಮನರಂಜನಾ / ಐತಿಹಾಸಿಕ / ಪುರಾತತ್ವ ಪ್ರಾಮುಖ್ಯತೆಗಳಿಗೆ ಒಳಪಟ್ಟಿರುವುದಿಲ್ಲ ಎಂಬ ಬಗ್ಗೆ ದೃಢೀಕರಣ ಪತ್ರ ಹಾಗೂ ಪ್ರಸ್ತಾಪಿತ ಜಾಗವು ಯಾವುದೇ ಮೀಸಲು ಅರಣ್ಯದ ಭಾಗಕ್ಕೆ ಒಳಪಡುವುದಿಲ್ಲ ಎಂಬ ಬಗ್ಗೆ ದೃಢೀಕರಣ ಪತ್ರ ಮತ್ತು ಉಪಯೋಗಿ ಸಂಸ್ಥೆಯವರ Form-A ಮತ್ತು ಅದಕ್ಕೆ ಸಂಬಂಧಿಸಿದ ಪೂರಕ ದಾಖಲಾತಿಗಳ 06 ಪ್ರತಿಗಳ ಹಾರ್ಡ್‌ಕಾಪಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸುತ್ತಾ ಮತ್ತು ಈ ಕಚೇರಿಯಿಂದ ಈಗಾಗಲೇ Parivesh Login ನಲ್ಲಿ ಸಾಫ್ಟ್‌ಕಾಫಿಯನ್ನು ತಮ್ಮ ಕಚೇರಿಯ ಲಾಗಿನ್‌ಗೆ ಅಪ್‌ಲೋಡ್ ಮಾಡಿ ಸಲ್ಲಿಸಲಾಗಿರುತ್ತದೆ ಎಂಬ ಮಾಹಿತಿಯನ್ನು ತಿಳಿಯಪಡಿಸುತ್ತಾ ಕೊಡಂಬೂರು ಗ್ರಾಮ ಸರ್ವೆ ನಂ. 128 ರಲ್ಲಿ 33 ಕೆ.ವಿ. ಲೈನ್ ಸಬ್‌ಸ್ಟೇಷನ್ ಮಾಡಲು ನೀಡಿರುವ 0.40 ಹೆಕ್ಟೇರ್ ಅರಣ್ಯ ಭೂಮಿಯ ಗುತ್ತಿಗೆ ಅವಧಿ ನವೀಕರಿಸುವ ಸಂಬಂಧ ಮುಂದಿನ ಕ್ರಮಕೈಗೊಳ್ಳಬೇಕಾಗಿ ತಮ್ಮಲ್ಲಿ ಈ ಮೂಲಕ ಕೋರಲಾಗಿದೆ.

ಗೌರವಗಳೊಂದಿಗೆ

ತಮ್ಮ ನಂಬುಗೆಯ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಡಿಕೇರಿ ವಿಭಾಗ, ಮಡಿಕೇರಿ